ಕಾಣುತ್ತಲೇ, 'ಅವರಿಲ್ರೀ' ಅಂಬೋಕೆ ಶುರುಹಚ್ಚಿಕೊಂಡರು. ಇದು ಬಗೆಹರಿಯದ್ದೆಂದು ಗಂಡಸರೂ ತಿರುಗಿಬಿದ್ದರು. 'ಹೋಗ್ರಯ್ಯಾ, ನಮ್ಮ ದನಕರುಗಳಿಗೇ ಮೇವಿಲ್ಲ. ನಿಮಗೆಲ್ಲಿಂದ ತರೋದು?' ಎಂದು ನಾಯಿಗಳಿಗೆ ಗದರಿದಂತೆ ಗದರಿದರು. ಕಲ್ಲು ಬೀಸಲಿಲ್ಲವಷ್ಟೆ. ಇದೀಗ ಪುನಃ ಗೌಡರಿಗೆ ದೂರು ಕೊಟ್ಟರು ಪೇದೆಗಳು. 'ನಾನೇನ್ರಯ್ಯ ಮಾಡ್ಲಿ. ನಮ್ಮ ಮನೆಯಾಗೆ ದನಗಳೇ ಇಲ್ಲ. ನಮ್ಮದೇನಿದ್ರು ಟ್ರ್ಯಾಕ್ಟರವೆ. ಕುಯ್ಯಾಕೂ ಕಾಳು ಬಿಡಿಸೋಕು ತೆನೆ ಬಡಿಯೋಕೂವೇ ಮಿಷೀನ್‌ಗಳವೆ. ತಂದು ನಿಲ್ಲಿಸಿದರಲ್ಲ ದನಗುಳ್ನ, ಆನನ್ಮಕ್ಳನ್ನೇ ಕೇಳಿ' ಎಂದು ಗರಂ ಆದರು. ಹಾಳಾಗಿ ಹೋಗ್ಲಿ ಅಂತ ಜಾನುವಾರುಗಳಿಗೆ ಶೆಡ್ ಹಾಕಿಸಿ ಕೊಡುವಷ್ಟು ಉದಾರಿಗಳಾದರು. ಎಸ್.ಐ. ಸಹ ಕೈಕಟ್ಟಿಕೂರುವ ಆಸಾಮಿಯೇನಲ್ಲ. ಹುಲ್ಲು ಖರೀದಿಸಲು, ದನಕಾಯಲು ಪೊಲೀಸರಿಗೆ ಕಾನೂನಿನಲ್ಲಿ ಏನಾದರೂ ಅವಕಾಶವಿದೆಯೆ? ಎಂದು ಕೇಳಲು ಪೊಲೀಸ್ ವರಿಷ್ಠಾಧಿಕಾರಿಗೆ ಫೋನ್ ಹಚ್ಚಿದ್ದ. ಅಲ್ಲಿಂದ ಸಿಕ್ಕಿದ್ದು ಉಗಿತ. 'ಅಷ್ಟು ಕಾಮನ್‌ಸೆನ್ಸ್ ಇಲ್ಲವೇನ್ರಿ? ಅವುಗಳನ್ನು ಗೋಶಾಲೆಗೆ ಹೊತ್ತು ಹಾಕ್ರಿರೀ' ಎಂದು ಎಸ್.ಪಿ. ಅರಚಿದ್ದ. ಪಕ್ಕದ ಹಳ್ಳಿಗಳಲ್ಲಿ ಒಬ್ಬ ಗೋಸಾಯಿ ಇದ್ದ. ಆತ ಎರಡು ಗೋಶಾಲೆ ತೆರದು ಗೋರಕ್ಷಕನೆಂದು ಪೇಪರಲ್ಲಿ ಫೋಟೊ ಸಮೇತ ಬರೆಸಿಕೊಂಡಿದ್ದ. ತಟ್ಟನೆ ಎಸ್.ಐ. ಆತನಿಗೆ ಫೋನ್ ಹಚ್ಚಿದ: 'ಸ್ವಾಮಿ, ಈತರಕ್ಕೆ ಈತರಾ. ಮೂವತ್ತು ಜಾನುವಾರುಗಳಿವೆ' ಅಂತ ಬೇಡಿಕೆಯಿಟ್ಟಾಗ ಗೋಸಾಯಿ ಮಣಿಯಲಿಲ್ಲ. 'ನನ್ನ ಗೋಶಾಲೆ ಚಿಕ್ಕದು. ನನ್ನಲ್ಲಿರುವ ಎರಡು ಗೋಶಾಲೆಗಳೂ ಭರ್ತಿಯಾಗವೆ. ನಮ್ಮಲ್ಲಿ ನೊ ಎಂಟ್ರಿ. ಹೌಸ್‌ಫುಲ್ ಬೋರ್ಡ್ ಹಾಕಿವ್ರಿ. ನಿಮಗೆ ಗಿಂಬಳ ಸಿಗತಿರಬೇಕಲ್ರಿ? ಅದರಾಗೊಂದೀಟು ಮೂಕಪ್ರಾಣಿಗಳಿಗೂ ಖರ್ಚು ಮಾಡ್ರಪಾ' ಎಂಬ ಪುಕ್ಕಟೆ ಉಪದೇಶ ನೀಡಿದ. ಎಸ್.ಐ. ಸುಸ್ತೋಸುಸ್ತು.

ಪ್ರಾಣಿಗಳ ಬವಣೆ ನೋಡಲಾಗದೆ ಪೇದೆ ಶಾಸ್ತ್ರಿಗೆ ಗುಡ್ಡಕ್ಕಾದರೂ ಹೊಡ್ಕೊಂಡು ಹೋಗಿ ಬರ್ರಿ ಅಂತ ಎಸ್.ಐ ನಯವಾಗಿ ಆರ್ಡರ್ ಮಾಡಿದ. ಶಾಸ್ತ್ರಿಯೂ ಪ್ರಾಣಿದಯೆ ಪ್ರಾಣಿಭಕ್ತಿಯುಳ್ಳವನಾಗಿ ಗುಡ್ಡಕ್ಕೆ ಹೊಡೆದುಕೊಂಡು ಹೋಗಿ ಬೋಳುಗುಡ್ಡದಲ್ಲಿ ಬೆಳೆದ ಕುರಚಲು ತಿನ್ನಿಸಿ, ಬಂಡೆಯ ತಗ್ಗಿನಲ್ಲಿದ್ದ ನೀರುಕುಡಿಸಿ ಅವುಗಳನ್ನು ತಣಿಸುತ್ತಾ 'ತನ್ನ ಏಕೈಕ ಹುಬ್ಬಲ್ಲಿನ ಮಗಳಿಗೆ ಲಗ್ನ ಗಟ್ಟಿಯಾಗೋ ಹಂಗೆ ಮಾಡ್ರಪ್ಪಾ' ಎಂದು ದನಗಳಿಗೆ ನಮಿಸುತ್ತಾ ತನ್ನ ಸೇವೆಗೆ ಕೂಲಿ ಬೇಡಿದ. ಎಸ್.ಐ. ಗೋಗರೆದಾಗ ಠಾಣೆಯ ಆವರಣದಲ್ಲಿ ಗೌಡರು ನೀರಿನ ಬಾನಿ ಕಟ್ಟಿಸಿಕೊಟ್ಟು ಮುನ್ಸಿಪಾಲಿಟಿಯವರಿಗೆ ಹೇಳಿ ನಳ ಹಾಕಿಸಿ ಹೆಲ್ಪ್ ಮಾಡಿದರು. ಅದರಿಂದಾಚೆ ಅವರು ನಿಗಾವಹಿಸಲಿಲ್ಲ. ಬಾಡೂಟಕ್ಕೂ ಸೊನ್ನೆ ಸುತ್ತಿದರು. ಕೆಲವು ದನಗಳಂತೂ ನಿಲ್ಲಲೂ ಆಗದಷ್ಟು ನಿತ್ರಾಣ. ಬಿದ್ದಲ್ಲೇ ಬಿದ್ದಿದ್ದು ಮೈ ಕಾಲು ಕೀಲುಗಳು ರಕ್ತಸಿಕ್ತವಾಗಿ ನೊಣಗಳೆಲ್ಲಾ ಅವುಗಳಲ್ಲೇ ಕ್ಯಾಂಪ್ ಹಾಕುವಾಗ ಎಸ್.ಐ. ಪಿತ್ತ ನೆತ್ತಿಗೇರಿತ್ತು. ಹಿಂ.ಜ.ತ. ಸೇನಾ ಪಡ್ಡೆಗಳು ಒಮ್ಮೆ ಚೆಕಿಂಗ್ ಇನ್‌ಸ್ಪೆಕ್ಟರ್‌ಗಳಂತೆ ಆಗಮಿಸಿ ಕೊಟ್ಟಿಗೆ ರೌಂಡೂ ಹೊಡೆದರು. ಸಾಯುವ ಸ್ಥಿತಿಯಲ್ಲಿರುವ ಜಾನುವಾರುಗಳನ್ನು ನೋಡಿ ಠಾಂಗ್ ಆದರು. 'ಏನ್ ಮಶ್ಕಿರಿ ಮಾಡ್ಲಿಕತ್ತಿರೇನ್?... ಇದರಾಗೆ ಒಂದೇನಾರ ಗೊಟಕ್ ಅನ್ಲಿ ನೋಡ್ರಿ... ನಿಮ್ಮ ಮ್ಯಾಗೆ ಕೇಸ್ ಹಾಕ್ತೀವಿ ಹುಷಾರ್' ಅಂತ ಠಾಣೆ ಒಳನುಗ್ಗಿ ಆವಾಜ್ ಹಾಕಿದರು. 'ನೋಡ್ರಪಾ, ನೀವೇನೋ ತಂದು ಇಳಿಸಿ ಹೋದವರು ಈಗ ದಯಮಾಡಿಸ್ತಿದಿರಾ. ಇವುಗಳನ್ನ ಸಾಕಿ ಸಲಹುತಿರೋರು ನಾವು. ಸುಮ್ಗೆ ಬಾಯಿ ಮಾಡಬ್ಯಾಡ್ರಿ. ದನ ಅಂದ್ರ ದೇವರು ಅಂಬೋ ನೀವು ಒಂದು ಹೊರೆಹುಲ್ಲುತಂದು ಹಾಕಿದ್ರಾ? ಹುಲ್ಲು ರೇಟ್ ಏನದೆ ಗೊತ್ತದೇನ್ ನಿಮ್ಗೆ? ಜನಕ್ಕೆ ಬಿಸ್ಲೇರಿ